## 2017 ಕ.ತೀ.ವ 672

### (ಕಲಬುರಗಿ ಪೀಠ)

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

ವಿಭಾಗೀಯ ವ್ಯವಸ್ಥಾಪಕರು, ರಿಲೆಯನ್ಸ್ ಜನರಲ್ ಇನ್‌ಶೂರೆನ್ಸ್ ಪ್ರೈವೇಟ್ ಲಿಮಿಟೆಡ್, ಗುಲ್ಬರ್ಗಾ –ವಿರುದ್ಧ– ಶ್ರೀಮತಿ ಅದೆಮ್ಮ ಮತ್ತು ಇತರರು*

ಮೋಟಾರು ವಾಹನಗಳ ಅಧಿನಿಯಮ, 1988ರ 173(1)ನೇ ಪ್ರಕರಣದ ಅನುಸಾರವಾಗಿನ ಮೊದಲ ನಿಯತ ಅಪೀಲು.

ಎರಡನೇ ಎದುರುದಾರನು, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂಎಸಿಟಿ ಹುಮನಾಬಾದ್ ಇವರ ಮುಂದೆ ದಾಖಲು ಮಾಡಿದ್ದ ಮೇಲಿನ ಎಂವಿಸಿ ಸಂಖ್ಯೆ 187/2013 ನಾಗೇಶ್ ಎಂಬ ಹೆಸರಿನ ಅವಿವಾಹಿತನ ಮರಣವನ್ನು ಪರಿಗಣಿಸಿ ಪರಿಹಾರ ನೀಡಲು ನಿರಾಕರಿಸಿ ತೀರ್ಪು ನೀಡಿದ ದಿನಾಂಕ 7.3.2014ರ ಮತ್ತು ಐತೀರ್ಪು ಪ್ರಶ್ನಿತ ಈ ಅಪೀಲಿನಲ್ಲಿ ಪ್ರಶ್ನಿಸಲಾಗಿದೆ.

ಆ ಬಗ್ಗೆ, ಪರಿಹಾರ ನೀಡಿದ್ದನ್ನು ಪರಿಗಣಿಸಿದ್ದಲ್ಲಿ, ನ್ಯಾಯಾಧಿಕರಣ 1/3ನೇ ಭಾಗವನ್ನು ಕಳೆದು ತಪ್ಪು ಮಾಡಿದೆ. ತನ್ನ ವೈಯಕ್ತಿಕ ಸುಸ್ಥಿತಿಯ ಸಲುವಾಗಿ ಶೇಕಡಾ 50ರಷ್ಟು ಕಳೆದು ಮತ್ತು ತಾಯಿಗೆ ಅವಲಂಬಿತದಂತೆ ಶೇಕಡಾ 50ರಷ್ಟ ರೊಂದಿಗೆ ಕಾಲ್ಪನಿಕ ಆದಾಯವನ್ನು ತೆಗೆದುಕೊಳ್ಳುವಂತೆ ಅಗತ್ಯಪಡಿಸಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ, ಮೃತನು, ಅವಿವಾಹಿತನಾಗಿದ್ದಾನೆ. ಆಕೆಯು ಜೀವಂತವಾಗಿರುವವರೆಗೆ ಅವನ ತಾಯಿಯ ಪಾಲನೆ ಕೈಗೊಳ್ಳುವುದು ಅವನ ಹೊಣೆಯಾಗಿದೆ. ಸಾಮಾನ್ಯವಾಗಿ, ತಾಯಿಯು, ಮಗನಿಂದ ಪ್ರತ್ಯೇಕವಾಗಿ ಬದುಕುವುದನ್ನು ನಿರೀಕ್ಷಿಸಲಾಗದು. ಸ್ವಭಾವಿಕ ಅಂಶಗಳ ಕ್ರಮದಲ್ಲಿ, ಪೋಷಕರು, ತಮ್ಮ ಜೀವಿತಾವಧಿಯಲ್ಲಿ ತಮ್ಮ ಮಕ್ಕಳ ಪಾಲನೆ ಮತ್ತು ಅಭಿರಕ್ಷೆಯ ಅಡಿಯಲ್ಲಿ ತಮ್ಮ ಜೀವನ ಪೂರ್ಣಗೊಳಿಸಲು ನಿರೀಕ್ಷಿಸಿರುತ್ತಾರೆ.

*ಸಂಕೀರ್ಣ ಮೊದಲನೇ ಅಪೀಲು ಸಂಖ್ಯೆ: 201354/2014 (ಎಂವಿ), ದಿನಾಂಕ: 18ನೇ ಅಕ್ಟೋಬರ್, 2016.

**ಆದ್ದರಿಂದ, ಪರಿಹಾರವನ್ನು, ಮಗನ ಮರಣದ ಕಾರಣ ಲೆಕ್ಕ ಹಾಕುವಂತೆ ಅಗತ್ಯಪಡಿಸಲಾಗಿದ್ದು, ಹಿರಿಯ ವಯಸ್ಸಿನವರಾದ ತಾಯಿಯ ವಯಸ್ಸನ್ನು ತೆಗೆದುಕೊಳ್ಳಲಾಗಿದೆ ಮತ್ತು ನ್ಯಾಯಾಧಿಕರಣ ಮೃತನ ವಯಸ್ಸನ್ನು ಪರಿಗಣಿಸದೆ ತಪ್ಪಾಗಿ ತೆಗೆದುಕೊಂಡಿದೆ.**

**ಸಾಮಾನ್ಯ ಸಂದರ್ಭಗಳಲ್ಲಿ ವೃತ್ತಿ ಮತ್ತು ಆದಾಯದ ರುಜುವಾತಿನ ಕೊರತೆಯಿಂದ, 2012ನೇ ವರ್ಷ ಮೃತನ ಕಾಲ್ಪನಿಕ ಆದಾಯವನ್ನು, ಪ್ರತಿ ತಿಂಗಳು 6,500/- ರೂಪಾಯಿಗಳಂತೆ ತೆಗೆದುಕೊಳ್ಳಲಾಗಿದೆ. ಆದ್ದರಿಂದ, ಈ ನ್ಯಾಯಾಲಯ, ಪ್ರತಿತಿಂಗಳು 6,500/- ರೂಪಾಯಿಗಳಂತೆ ಆದಾಯವನ್ನು ತೆಗೆದುಕೊಳ್ಳಲಾಗಿದೆ. ಶೇ.50ರಷ್ಟನ್ನು ಕಡಿತಗೊಳಿಸಿದ್ದಲ್ಲಿ, ತಾಯಿಗೆ, ಅವಲಂಬನೆಯ ನಷ್ಟ ಪ್ರತಿ ತಿಂಗಳು 3,250/- ರೂಪಾಯಿಗಳು ಅಥವಾ ವಾರ್ಷಿಕ 39,000/- ರೂಪಾಯಿಗಳಿಗೆ ಬರುತ್ತದೆ. 45 ವರ್ಷಗಳನ್ನು ಹೊಂದಿದ ತಾಯಿಯ ವಯಸ್ಸು, 14ರ ಗುಣಕವನ್ನು ಅನ್ವಯಿಸುತ್ತದೆ. ಆದ್ದರಿಂದ, ತಾಯಿಗೆ ಅವಲಂಬನೆಯ ಒಟ್ಟು ನಷ್ಟ 5,46,000/- ರೂಪಾಯಿಗಳು, ಇದರ ಜೊತೆಗೆ ಆಕೆಯು, 70,000/- ರೂಪಾಯಿಗಳಂತೆ ಸಾಂಪ್ರದಾಯಿಕ ಶೀರ್ಷಿಕೆಗಳ ಅಡಿಯಲ್ಲಿ ಪರಿಹಾರಕ್ಕೆ ಸಹ ಹಕ್ಕುಳ್ಳವರಾಗಿರುತ್ತಾರೆ. ಹಾಗಾಗಿ, ನ್ಯಾಯಾಧಿಕರಣವು ನೀಡಿದ 8,84,000/- ರೂ.ಗಳಿಗೆ ಬದಲಾಗಿ 6,16,000/- ರೂ.ಗಳ ನಷ್ಟ ಪರಿಹಾರ ಸಂದಾಯದ ಒಟ್ಟು ಮೊತ್ತವಾಗುತ್ತದೆ.**

**ವಿಮಾ ಕಂಪನಿಯ ಅಪೀಲನ್ನು ಭಾಗಶಃ ಅಂಗೀಕರಿಸುವುದರ ಮೂಲಕ ಈ ನ್ಯಾಯಾಲಯವು ವಿಮಾ ಮೊತ್ತವನ್ನು ಪರಿಷ್ಕರಿಸಿ ಮರುನಿಗದಿಪಡಿಸಿದೆ.**

ಅಪೀಲುದಾರರ ಪರ: ಶ್ರೀಮತಿ ಪ್ರೀತಿ ಪಾಟೀಲ್ ಮೆಲ್‌ಕುಂದಿ, ವಕೀಲರು.
1ರಿಂದ 3ನೇ ಪ್ರತ್ಯಪೀಲುದಾರರ ಪರ : ಶ್ರೀ ಬಸವರಾಜ್ ಆರ್. ಮಠ್, ವಕೀಲರು.
4ನೇ ಪ್ರತ್ಯರ್ಜಿದಾರರಿಗೆ ಜಾರಿ ಮಾಡಲಾಗಿದೆ ಮತ್ತು ಪ್ರತಿನಿಧಿಸಿರುವುದಿಲ್ಲ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ:**

ಎರಡನೇ ಎದುರುದಾರನು, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂಎಸಿಟಿ ಹುಮನಾಬಾದ್ ಇವರ ಮುಂದೆ ದಾಖಲು ಮಾಡಿದ್ದ ಮೇಲಿನ ಎಂವಿಸಿ ಸಂಖ್ಯೆ 187/2013 ನಾಗೇಶ್ ಎಂಬ ಹೆಸರಿನ ಅವಿವಾಹಿತನ ಮರಣವನ್ನು ಪರಿಗಣಿಸಿ ಪರಿಹಾರ ನೀಡಲು ನಿರಾಕರಿಸಿ ತೀರ್ಪು ನೀಡಿದ ದಿನಾಂಕ 7.3.2014ರ ಮತ್ತು ಐತೀರ್ಪು ಪ್ರಶ್ನಿತ ಈ ಅಪೀಲಿನಲ್ಲಿ ಪ್ರಶ್ನಿಸಲಾಗಿದೆ.

2. ನೋಂದಣಿ ಸಂಖ್ಯೆ ಕೆಎ 39/ಟಿ–3688 ಮತ್ತು 3689 ಹೊಂದಿದ ಟ್ರಾಕ್ಟರ್ ಟ್ರೇಲರ್‌ನ್ನೊಳಗೊಂಡು ಮೃತ ನಾಗೇಶನಿಗೆ ಅಪಘಾತ ನಡೆದಿದೆಯೆಂಬ ಸಂಗತಿಯು ವಿವಾದವಾಗಿರುವುದಿಲ್ಲ. ಸದರಿ ಅಪಘಾತದಲ್ಲಿ ಉಂಟಾದ ಗಾಯಗಳು, ಅವನ ಮರಣಕ್ಕೆ ಕಾರಣವಾಗಿದೆ ಎಂಬುದು ಸಹ ವಿವಾದವಾಗಿರುವುದಿಲ್ಲ. ಒಪ್ಪಲಾದಂತೆ, ಕ್ಲೇಮು ಅರ್ಜಿಯನ್ನು ಅವನ ಇಬ್ಬರು ಸಹೋದರರನೊಂದಿಗೆ ಅವನ ತಾಯಿಯು ದಾಖಲು ಮಾಡಿದ್ದಾರೆ. ಕ್ಲೇಮು ಅರ್ಜಿಯಲ್ಲಿರುವಂತೆ ಮೃತನಿಗೆ ಕಿರಿಯರಾದ ಅವರ ಸಹೋದರರು ಕ್ಲೇಮು ಮಾಡಿದ್ದಾರೆ. ಹಾಗಾಗಿ, ನಿಶಾನೆ ಪಿ.2ನಲ್ಲಿ ದೂರನ್ನು ಪರಿಗಣಿಸಿರುವಾಗ, ನೀಡಿದ ದೂರಿನ ಸಮಯದಲ್ಲಿ ಎರಡನೇ ಕ್ಲೇಮುದಾರನು, ಅವನ ವೃತ್ತಿ ಕೂಲಿಯಾಗಿತ್ತು ಮತ್ತು ಅವನಿಗೆ 28 ವರ್ಷಗಳ ವಯಸ್ಸಾಗಿತ್ತು ಎಂದು ಹೇಳಲಾಗಿದೆ. ಅವನ ಪ್ರಕಾರ ಮೃತ ನಾಗೇಶನು, ಅವನ ಕಿರಿಯ ಸಹೋದರನಾಗಿದ್ದಾನೆ. ಆ ವಿಷಯದ ದೃಷ್ಟಿಯಿಂದ, ಈ ಅಪೀಲಿನಲ್ಲಿ ಪರಿಗಣಿಸಬಹುದಾದಂತೆ ತಾಯಿಗೆ ಪರಿಹಾರ ಸಂದಾಯವಾಗುವಂತೆ ಉಲ್ಲೇಖಿಸಲಾಗಿದೆ ಎಂಬುದು ಈ ನ್ಯಾಯಾಲಯದ ಭಾವನೆಯಾಗಿದೆ. ಇತರೇ ಕ್ಲೇಮುದಾರರಷ್ಟರ ಮಟ್ಟಿಗೆ, ಇತ್ಯಾದಿ, ಮೃತ ನಾಗೇಶನಿಗೆ ಹಿರಿಯರಾಗಿರುವ ಸಹೋದರರಾದ 2 ಮತ್ತು 3ನೇ ಕ್ಲೇಮುದಾರರಾದ, ಅವರು, ಯಾವುದೇ ಪರಿಹಾರಕ್ಕೆ ಹಕ್ಕುಳ್ಳವರಾಗಿರುವುದಿಲ್ಲ.

3. ಆ ಬಗ್ಗೆ, ಪರಿಹಾರ ನೀಡಿದ್ದನ್ನು ಪರಿಗಣಿಸಿದ್ದಲ್ಲಿ, ನ್ಯಾಯಾಧಿಕರಣ 1/3ನೇ ಭಾಗವನ್ನು ಕಳೆದು ತಪ್ಪು ಮಾಡಿದೆ. ತನ್ನ ವೈಯಕ್ತಿಕ ಸುಸ್ಥಿತಿಯ ಸಲುವಾಗಿ ಶೇಕಡಾ 50ರಷ್ಟು ಕಳೆದು ಮತ್ತು ತಾಯಿಗೆ ಅವಲಂಬಿತದಂತೆ ಶೇಕಡಾ 50ರಷ್ಟ ರೊಂದಿಗೆ ಕಾಲ್ಪನಿಕ ಆದಾಯವನ್ನು ತೆಗೆದುಕೊಳ್ಳುವಂತೆ ಅಗತ್ಯಪಡಿಸಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ, ಮೃತನು, ಅವಿವಾಹಿತನಾಗಿದ್ದಾನೆ. ಆಕೆಯು ಜೀವಂತವಾಗಿರುವವರೆಗೆ ಅವನ ತಾಯಿಯ ಪಾಲನೆ ಕೈಗೊಳ್ಳುವುದು ಅವನ ಹೊಣೆಯಾಗಿದೆ. ಸಾಮಾನ್ಯವಾಗಿ, ತಾಯಿಯು, ಮಗನಿಂದ ಪ್ರತ್ಯೇಕವಾಗಿ ಬದುಕುವುದನ್ನು ನಿರೀಕ್ಷಿಸಲಾಗದು. ಸ್ವಭಾವಿಕ ಅಂಶಗಳ ಕ್ರಮದಲ್ಲಿ, ಪೋಷಕರು, ತಮ್ಮ ಜೀವಿತಾವಧಿಯಲ್ಲಿ ತಮ್ಮ ಮಕ್ಕಳ ಪಾಲನೆ ಮತ್ತು ಅಭಿರಕ್ಷೆಯ ಅಡಿಯಲ್ಲಿ ತಮ್ಮ ಜೀವನ ಪೂರ್ಣಗೊಳಿಸಲು ನಿರೀಕ್ಷಿಸಿರುತ್ತಾರೆ.

4. ಆದ್ದರಿಂದ, ಪರಿಹಾರವನ್ನು, ಮಗನ ಮರಣದ ಕಾರಣ ಲೆಕ್ಕ ಹಾಕುವಂತೆ ಅಗತ್ಯಪಡಿಸಲಾಗಿದ್ದು, ಹಿರಿಯ ವಯಸ್ಸಿನವರಾದ ತಾಯಿಯ ವಯಸ್ಸನ್ನು ತೆಗೆದುಕೊಳ್ಳಲಾಗಿದೆ ಮತ್ತು ನ್ಯಾಯಾಧಿಕರಣ ಮೃತನ ವಯಸ್ಸನ್ನು ಪರಿಗಣಿಸದೆ ತಪ್ಪಾಗಿ ತೆಗೆದುಕೊಂಡಿದೆ. ಹಾಗಾಗಿ, ಪ್ರಸ್ತುತ ಪ್ರಕರಣದಲ್ಲಿ, ಕ್ಲೇಮುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀ ಬಸವರಾಜ್, ಆರ್. ಮ್ಯಾಥ್ ಅಧಿವಿಚಾರಣೆ ಮಾಡಲಾಗಿದ್ದು, ಮೃತನ ವಯಸ್ಸನ್ನು ಸರಿಯಾಗಿ ತೆಗೆದುಕೊಂಡ ನ್ಯಾಯಾಧಿಕರಣದ ಗುಣಕ ಅನ್ವಯಿಸುತ್ತದೆ ಮತ್ತು ಆ ಬಗ್ಗೆ ವಿವಿಧ ತೀರ್ಪುಗಳ ಮೇಲೆ ಅವಲಂಬಿಸಿರುವಂತೆ ಅವನನ್ನು ಅಧಿವಿಚಾರಣೆ ಮಾಡಲಾಗಿದೆ ಎಂಬುದನ್ನು ರುಜುವಾತು ಮಾಡುತ್ತದೆ. ಈ ನ್ಯಾಯಾಲಯ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯ ತೀರ್ಪುಗಳ ಶ್ರೇಣಿಯಲ್ಲಿರುವಂತೆ ಅವಿವಾಹಿತನ ಮರಣದ ಕಾರಣಕ್ಕಾಗಿ ಪರಿಹಾರವನ್ನು ಪರಿಗಣಿಸಿರುವಾಗ ಪರಿಹಾರವನ್ನು ಲೆಕ್ಕ ಹಾಕಲಾದ ರೀತಿಯಿಂದ ಅಂಗೀಕರಿಸಿರುವಂತೆ ಅದು, ಅಡ್ಡ ಹಾದಿ ಹಿಡಿದಿದೆಯೆಂಬ ಕಾರಣಕ್ಕಾಗಿ ಅದನ್ನು ಅಂಗೀಕರಿಸಲು ಈ ನ್ಯಾಯಾಲಯ ಒಲವು ತೋರಿಲ್ಲ.

5. ಒಂದು ಅಥವಾ ಇತರೇ ತೀರ್ಪಿನಲ್ಲಿರುವ ತಪ್ಪು ಅಭಿಪ್ರಾಯೋಕ್ತಿಯನ್ನು, ಆ ಬಗ್ಗೆ ಹೇಳಲಾದ ಕಾನೂನಿನಂತೆ ತೆಗೆದುಕೊಳ್ಳಲಾಗದು, ಹಾಗಾಗಿ, ನಿಶ್ಚಿತಪಡಿಸಿಕೊಂಡ ಗುಣಾಂಕವನ್ನು ಮೃತನ ವಯಸ್ಸಿಗೆ ತೆಗೆದುಕೊಂಡಿದ್ದು ತಪ್ಪಾಗಿದೆ. ಅಷ್ಟರಮಟ್ಟಿಗೆ, ಈ ಅಪೀಲನ್ನು ಅಂಗೀಕರಿಸಲಾಗಿದೆ ಮತ್ತು ಪರಿಹಾರ ಸಂದಾಯವನ್ನು ಕೆಳಗಿನಂತೆ ಲೆಕ್ಕ ಹಾಕಲಾಗಿದೆ.

6. ಸಾಮಾನ್ಯ ಸಂದರ್ಭಗಳಲ್ಲಿ ವೃತ್ತಿ ಮತ್ತು ಆದಾಯದ ರುಜುವಾತಿನ ಕೊರತೆಯಿಂದ, 2012ನೇ ವರ್ಷ ಮೃತನ ಕಾಲ್ಪನಿಕ ಆದಾಯವನ್ನು, ಪ್ರತಿ ತಿಂಗಳು 6,500/- ರೂಪಾಯಿಗಳಂತೆ ತೆಗೆದುಕೊಳ್ಳಲಾಗಿದೆ. ಆದ್ದರಿಂದ, ಈ ನ್ಯಾಯಾಲಯ, ಪ್ರತಿತಿಂಗಳು 6,500/- ರೂಪಾಯಿಗಳಂತೆ ಆದಾಯವನ್ನು ತೆಗೆದುಕೊಳ್ಳಲಾಗಿದೆ. ಶೇ.50ರಷ್ಟನ್ನು ಕಡಿತಗೊಳಿಸಿದ್ದಲ್ಲಿ, ತಾಯಿಗೆ, ಅವಲಂಬನೆಯ ನಷ್ಟ ಪ್ರತಿ ತಿಂಗಳು 3,250/- ರೂಪಾಯಿಗಳು ಅಥವಾ ವಾರ್ಷಿಕ 39,000/- ರೂಪಾಯಿಗಳಿಗೆ ಬರುತ್ತದೆ. 45 ವರ್ಷಗಳನ್ನು ಹೊಂದಿದ ತಾಯಿಯ ವಯಸ್ಸು, 14ರ ಗುಣಕವನ್ನು ಅನ್ವಯಿಸುತ್ತದೆ. ಆದ್ದರಿಂದ, ತಾಯಿಗೆ ಅವಲಂಬನೆಯ ಒಟ್ಟು ನಷ್ಟ 5,46,000/- ರೂಪಾಯಿಗಳು, ಇದರ ಜೊತೆಗೆ ಆಕೆಯು, 70,000/- ರೂಪಾಯಿಗಳಂತೆ ಸಾಂಪ್ರದಾಯಿಕ ಶೀರ್ಷಿಕೆಗಳ ಅಡಿಯಲ್ಲಿ ಪರಿಹಾರಕ್ಕೆ ಸಹ ಹಕ್ಕುಳ್ಳವರಾಗಿರುತ್ತಾರೆ. ಹಾಗಾಗಿ, ನ್ಯಾಯಾಧಿಕರಣವು ನೀಡಿದ 8,84,000/- ರೂ.ಗಳಿಗೆ ಬದಲಾಗಿ 6,16,000/- ರೂ.ಗಳ ನಷ್ಟ ಪರಿಹಾರ ಸಂದಾಯದ ಒಟ್ಟು ಮೊತ್ತವಾಗುತ್ತದೆ.

7. ಅದಕ್ಕನುಸಾರವಾಗಿ, ವಿಮಾ ಕಂಪನಿಯಿಂದ ದಾಖಲು ಮಾಡಿದ ಅಪೀಲನ್ನು ಅರ್ಜಿಯ ದಿನಾಂಕದಿಂದ ಠೇವಣಿಯ ದಿನಾಂಕದವರೆಗೆ ವಾರ್ಷಿಕ ಶೇ.5ರಂತೆ ಬಡ್ಡಿಯೊಂದಿಗೆ 6,16,000/- ರೂಪಾಯಿಗಳನ್ನು ಪಾವತಿಸುವಂತೆ ಪರಿಹಾರ ಸಂದಾಯವನ್ನು ಮರು ನಿಗದಿಪಡಿಸುವುದರ ಮೂಲಕ ಭಾಗಶಃ ಅಂಗೀಕರಿಸಲಾಗಿದೆ.

8. ಪರಿಷ್ಕೃತ ಪರಿಹಾರದ ಪೈಕಿ, ಪ್ರಮಾಣಾನುಸಾರ ಬಡ್ಡಿಯೊಂದಿಗೆ ಪರಿಹಾರದ ಶೇ.90ರಷ್ಟನ್ನು, ದೀರ್ಘಕಾಲಿಕವಾಗಿ ಬಡ್ಡಿ ಪಡೆದುಕೊಳ್ಳುವ ಹಕ್ಕಿನೊಂದಿಗೆ ಐದು

ವರ್ಷಗಳ ಅವಧಿಗಾಗಿ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಿಗದಿತ ಠೇವಣಿಯಲ್ಲಿ ಹೂಡುವಂತೆ ಆದೇಶಿಸಲಾಗಿದೆ. ಪ್ರಮಾಣಾನುಸಾರ ಬಡ್ಡಿಯೊಂದಿಗೆ ಬಾಕಿ ಶೇ.10ರಷ್ಟನ್ನು ಆಕೆಯ ವೈಯಕ್ತಿಕ ವೆಚ್ಚಗಳನ್ನು ಭರಿಸಲು ಮೃತನ ತಾಯಿಯ ಹೆಸರಿನಲ್ಲಿ ಬಿಡುಗಡೆಗೊಳಿಸುವಂತೆ ಆದೇಶಿಸಲಾಗಿದೆ.

9. ಭಾಗಶಃ ಈ ಅಪೀಲನ್ನು ಪುರಸ್ಕರಿಸಿದ ದೃಷ್ಟಿಯಿಂದ, ಅದರ ಇಡೀ ಮೊತ್ತವನ್ನು ಅಪೀಲುದಾರನಿಂದ ಠೇವಣಿಯಿಡಲು, ಪಾವತಿಗಾಗಿ ನ್ಯಾಯಾಧಿಕರಣಕ್ಕೆ ಕಳುಹಿಸುವಂತೆ ಆದೇಶಿಸಲಾಗಿದೆ. ಬಾಕಿ ಯಾವುದೇ ಇದ್ದಲ್ಲಿ, ವಿಮಾ ಕಂಪನಿಯಿಂದ, ಠೇವಣಿಯಿಡುವಂತೆ ಅಗತ್ಯಪಡಿಸಲಾಗಿದ್ದು, ಅದನ್ನು ಈ ತೀರ್ಪಿನ ದೃಢೀಕೃತ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಆರುವಾರಗಳೊಳಗೆ ಠೇವಣಿಯಿಡತಕ್ಕದ್ದು.